


ಹಳೆ ಬೇರು ಅಮಿತ್ ಶಾ ಅವರನ್ನು ಸುತ್ತುವರಿದ ಹೊಸ ಚಿಗುರಿನಂತಹ ಆಟಗಾರರು

2014, 2017) 8ಕ್ಕಿಂತ ಹೆಚ್ಚು ಇತ್ತೆನ್ನುವುದು ಗೊತ್ತಾಗುತ್ತದೆ. ಕಾರ್ಮಿಕರ ದಿನಾಚರಣೆ ದಿನ ಆರ್‌ಸಿಬಿ ವಿರುದ್ಧ ಆಡಿದ ಪಂದ್ಯವೂ ಸೇರಿದಂತೆ ಅವರು ಇದುವರೆಗೆ 160 ಐಪಿಎಲ್ ಪಂದ್ಯಗಳನ್ನು ಆಡಿದ್ದಾರೆ. 172 ವಿಕೆಟ್‌ಗಳನ್ನು ಪಡೆದಿದ್ದಾರೆ. ಮೊದಲ ಐಪಿಎಲ್‌ನಲ್ಲಿಯೇ ಒಮ್ಮೆ ಐದು ವಿಕೆಟ್‌ಗಳ ಗೊಂಚಲು ಪಡೆದದ್ದದ್ದು ಶ್ರೇಷ್ಠ ಸಾಧನೆ. ಮೊನ್ನೆ ಲಸಿತ್ ಮಾಲಿಂಗ ಹೆಸರಿನಲ್ಲಿ ಇದ್ದ 170 ಐಪಿಎಲ್ ವಿಕೆಟ್‌ಗಳ ಗಡಿಯನ್ನು ಅವರು ದಾಟಿದರು. ಐಪಿಎಲ್‌ನಲ್ಲಿ ಅತಿ ಹೆಚ್ಚು ವಿಕೆಟ್ ಪಡೆದವರ ಯಾದಿಯಲ್ಲಿ ಈಗ ಮಿಶ್ರಾ ಮೂರನೇ ಹೆಸರು. ಅವರಿಗಿಂತ ಮೇಲೆ ಡ್ವಾನ್ ಬ್ರಾವೊ (183 ವಿಕೆಟ್) ಹಾಗೂ ಯಜುವೇಂದ್ರ ಚಾಹಲ್ (178 ವಿಕೆಟ್) ಇದ್ದಾರೆ. ಪಿಯೂಷ್ ಚಾವ್ಲಾ (170) ಕೂಡ ಮಲಿಂಗ ಪಡೆದಷ್ಟೇ ವಿಕೆಟ್‌ಗಳನ್ನು ಖಾತೆಗೆ ಹಾಕಿಕೊಂಡಿದ್ದು, ಅವರು ಕೂಡ ಇನ್ನೂ ಆಡುತ್ತಿದ್ದಾರೆ.

ಮಿಶ್ರಾ ಮೊದಲ ಟೆಸ್ಟ್ ಆಡಿಸ ಪ್ರಸಂಗವನ್ನು ಮತ್ತೊಮ್ಮೆ ನೆನಪಿಸಿಕೊಳ್ಳಬೇಕಿದೆ. ಆಗ ಗಾಯಗೊಂಡಿದ್ದ ಕುಂಬ್ಳೆ ಪಾಲಿಗೆ ಅದು ಕ್ರಿಕೆಟ್‌ನ ಮುಗಿದ ಅಧ್ಯಾಯವೇ ಆಯಿತು. ಅದೇ ಹೊತ್ತಿನಲ್ಲಿ ಮಿಶ್ರಾ ಆಸ್ಟ್ರೇಲಿಯಾ ವಿರುದ್ಧದ ಸರಣಿಯಲ್ಲಿ 14 ವಿಕೆಟ್‌ಗಳನ್ನು ತಮ್ಮದಾಗಿಸಿಕೊಂಡರು. ಅವರು ಕುಂಬ್ಳೆ ಉತ್ತರಾಧಿಕಾರಿ ಆಗಬಲ್ಲರೆ ಎಂಬ ಪ್ರಶ್ನೆ ಎದುರಲ್ಲಿತ್ತು. ಆದರೆ, ಅವರು ಹಾಗೇನೂ ಆಗಲಿಲ್ಲ. ಸ್ಪಿನ್‌ಗೆ ನೆರವು ನೀಡದ ಪಿಚ್‌ಗಳಲ್ಲಿ ಅವರು ಪ್ರಭಾವಿ ಎನಿಸಿಕೊಳ್ಳಲಿಲ್ಲ. ಇದರಿಂದಾಗಿಯೇ ಅವರ ಅಂತರರಾಷ್ಟ್ರೀಯ ಕ್ರಿಕೆಟ್ ಬದುಕಿನಲ್ಲಿ ಹೂವಿಗಿಂತ ಮುಳ್ಳುಗಳೇ ಹೆಚ್ಚು ಕಾಣುತ್ತವೆ. 2016ರ ವರೆಗೆ ಅಷ್ಟೆ ಅವರು ಟೆಸ್ಟ್ ಆಡಲಾದದ್ದು. 22 ಪಂದ್ಯಗಳ 44 ಇನಿಂಗ್ಸ್‌ಗಳಲ್ಲಿ 76 ವಿಕೆಟ್ ಪಡೆದದ್ದು ದೊಡ್ಡ ಸಾಧನೆಯಾಗಲು ಸಾಧ್ಯವಿಲ್ಲವಲ್ಲ. ಏಕದಿನ ಪಂದ್ಯದ ಬದುಕೂ ಅದೇ ವರ್ಷ ಮುಗಿದದ್ದು. ಆಡಲಾದದ್ದು 36 ಏಕದಿನದ ಪಂದ್ಯಗಳಲ್ಲಷ್ಟೆ. 64 ವಿಕೆಟ್‌ಗಳು ಖಾತೆಗೆ ಸೇರಿದ್ದವು. ಏಕದಿನದ ಪಂದ್ಯಗಳಲ್ಲಿ ಅವರ ಎಕಾನಮಿ 4.72 ಇರುವುದು ಅವರೇಕೆ ಮುಖ್ಯ ಎನ್ನುವುದನ್ನು ಸ್ಪಷ್ಟಪಡಿಸುತ್ತದೆ.

2021ರ ಮೇ ತಿಂಗಳಲ್ಲಿ ಮಿಶ್ರಾ ಕೋವಿಡ್‌ನಿಂದ ಬಳಲಿದ್ದರು. ಆರೋಗ್ಯ ಏರುಪೇರಾಗಿತ್ತು. 2015ರಲ್ಲಿ ಲೈಂಗಿಕ ದೌರ್ಜನ್ಯ ಪ್ರಕರಣವೊಂದರ ಆರೋಪದ ಮೇಲೆ ಅವರನ್ನು ಪೊಲೀಸರು ಬಂಧಿಸಿದ್ದರು. ಆಮೇಲೆ ಜಾಮೀನು ದೊರೆತು, ಬಿಡುಗಡೆಯಾಗಿದ್ದರು.

ಐಪಿಎಲ್ ಮಿಶ್ರಾ ಪಾಲಿಗೆ ಆಡುಂಬೊಲವಾಯಿತು. ಐಪಿಎಲ್‌ನಲ್ಲಿ ಮೂರು ಸಲ ಅವರು ಹ್ಯಾಟ್ರಿಕ್ ವಿಕೆಟ್‌ಗಳನ್ನು ಪಡೆದಿರುವ ಏಕೈಕ ಬೌಲರ್ ಅವರು. 2008ರಲ್ಲಿ ಡೆಲ್ಲಿ ಡೇರ್‌ಡೆವಿಲ್ಸ್ ತಂಡದ ಪರವಾಗಿ ಆಡಿದ್ದಾಗ ಡೆಕ್ಕನ್ ಚಾರ್ಜರ್ಸ್ ವಿರುದ್ಧ ಹ್ಯಾಟ್ರಿಕ್ ಪಡೆದಿದ್ದರು. 2011ರಲ್ಲಿ ಡೆಕ್ಕನ್ ಚಾರ್ಜರ್ಸ್ ಪರವಾಗಿ ಆಡಿ, ಕಿಂಗ್ಸ್ ಇಲೆವೆನ್ ಪಂಜಾಬ್‌ನ ಮೂವರು ಬ್ಯಾಟ್ಸ್‌ಮನ್‌ಗಳನ್ನು ಸತತ ಎಸೆತಗಳಲ್ಲಿ ಔಟ್ ಮಾಡಿದ್ದರು. 2013ರಲ್ಲಿ ಪುಣೆ ವಾರಿಯರ್ಸ್ ಇಂಡಿಯಾ ಎದುರು ಆಡಿ, ಸನ್‌ರೈಸರ್ಸ್ ಹೈದರಾಬಾದ್ ಪರವಾಗಿ ಹ್ಯಾಟ್ರಿಕ್ ಸಾಧಿಸಿದ್ದರು.

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಹೆಚ್ಚು ಸಿಹಿಯುಣ್ಣದ ಮಿಶ್ರಾ, ದೇಸಿ ಕ್ರಿಕೆಟ್‌ನಲ್ಲಿ ಹರಿಯಾಣ ತಂಡದ ಪರವಾಗಿ ಉತ್ತಮವಾಗಿ ಆಡುತ್ತಲೇ ಇದ್ದರು. 2015ರಲ್ಲಿ ಶ್ರೀಲಂಕಾ ವಿರುದ್ಧ ಆಡಲು ಮತ್ತೆ ಅವರಿಗೆ ಬುಲಾವು ಸಿಕ್ಕಿತು. ಅದಾಗಲೇ ಟೆಸ್ಟ್ ಆಡಿ ನಾಲ್ಕು ವರ್ಷಗಳಾಗಿತ್ತು. ಆದರೂ ಉತ್ತಮವಾಗಿ ಬೌಲ್ ಮಾಡಿ, ಮೂರು ಟೆಸ್ಟ್‌ಗಳಲ್ಲಿ 15 ವಿಕೆಟ್‌ಗಳನ್ನು ಪಡೆದಿದ್ದರು. ಆರ್. ಅಶ್ವಿನ್‌ಗೆ ಉತ್ತಮ ಸಾಥ್ ನೀಡಿದ ಸಂದರ್ಭ ಅದು.

ರವೀಂದ್ರ ಜಡೇಜಾ ಸ್ಪಿನ್ನರ್ ಆಲ್‌ರೌಂಡರ್ ಆಗಿ ತಂಡಕ್ಕೆ ಸಿಕ್ಕಮೇಲೆ ಮಿಶ್ರಾ ಮೇಲಿದ್ದ ಫೋಕಸ್ ಲೈಟ್ ಪಕ್ಕಕ್ಕೆ ಸರಿಯಿತು. ಇಷ್ಟೆಲ್ಲ ಏರುಪೇರಿನ ಬದುಕಿನ ನಡುವೆಯೂ ಅವರ ಆಟದ ಉತ್ಸಾಹ ಈಗಲೂ ಕಣ್ಣಿಗೆ ಕಟ್ಟುತ್ತದೆ. ದಪ್ಪಗಾಗಿರುವ ಹೊಟ್ಟೆ, ಗುಂಡು ಮುಖದ ಅಮಿತ್ ಮಿಶ್ರಾ ಈಗಲೂ ಹಾಕುವ ಚೆಂಡು ತಿರುವು ಪಡೆಯುವುದನ್ನು ನೋಡಿದಾಗ ಅವರಿಗೆ ಅಷ್ಟೇನೂ ವಯಸ್ಸಾಗಿಲ್ಲ ಎಂದೂ ಅನಿಸದೇ ಇರದು.